

# ರುದ್ರ-ರಮಣೀಯ 'ಲೀಡರ್'

ಈತ ಜನಸಾಮಾನ್ಯರನ್ನು ಕಾಯುವ ನಾಯಕ ಎನ್ನುವುದು ಶಿವರಾಜಕುಮಾರ್ ನಟನೆಯ 'ಲೀಡರ್' ಚಿತ್ರದ ನಾಯಕನ ಪಾತ್ರದ ಬಗ್ಗೆ ಈವರೆಗೆ ಪ್ರಚಲಿತದಲ್ಲಿದ್ದ ಮಾತು. ಈಚೆಗೆ ಬಿಡುಗಡೆಯಾಗಿರುವ ಸಿನಿಮಾದ ಪೋಸ್ಟರ್‌ಗಳು ಹೇಳುತ್ತಿರುವ ಕಥೆಯ ಪ್ರಕಾರ – ಚಿತ್ರದಲ್ಲಿ ಶಿವಣ್ಣನದು ದೇಶ ಕಾಯುವ 'ಲೀಡರ್' ಪಾತ್ರ!

ಮಿಲಿಟರಿ ಅಧಿಕಾರಿಯ ಪಾತ್ರದಲ್ಲಿ ಸುದೀಪ್ ನಟಿಸಿರುವ 'ಹೆಬ್ಬುಲಿ' ಸಿನಿಮಾ ತೆರೆಕಂಡಿರುವ ಬೆನ್ನಿಗೆ, 'ಲೀಡರ್' ಚಿತ್ರದ ಪೋಸ್ಟರ್‌ಗಳು ಹೊರಬಿದ್ದಿವೆ. 'ಹೆಬ್ಬುಲಿ' ಚಿತ್ರದಂತೆಯೇ 'ಲೀಡರ್' ಬಳಗ ಕೂಡ ಕಾಶ್ಮೀರದಲ್ಲಿ ಚಿತ್ರೀಕರಣ ನಡೆಸಿಕೊಂಡು ಬಂದಿದೆ. ಬೆಂಗಳೂರು–ಹೈದರಾಬಾದ್‌ನ ಮೂವತ್ತು ಫೈಟರ್‌ಗಳನ್ನು ಒಳಗೊಂಡ ಸುಮಾರು 120 ಮಂದಿಯ ತಂಡ 'ಲೀಡರ್'ಗಾಗಿ ಚಿತ್ರೀಕರಣ ನಡೆಸಿದೆ. ಶಿವರಾಜ್ ಅವರೊಂದಿಗೆ ವಿಜಯ ರಾಘವೇಂದ್ರ, ಗುರು ಜಗ್ಗೇಶ್, ಪ್ರಣೀತಾ, ಮುಂತಾದ ಕಲಾವಿದರು ಕೂಡ ಕಾಶ್ಮೀರದ ಪ್ರತಿಕೂಲ ಪರಿಸರದಲ್ಲಿ ನಡೆದ ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ. ನರಸಿಂಹ (ಸಹನಾ ಮೂರ್ತಿ) 'ಲೀಡರ್' ಚಿತ್ರದ ನಿರ್ದೇಶಕರು. ಅವರಿಗೆ ಕಾಶ್ಮೀರದ ಪ್ರದೇಶದಲ್ಲಿ ಚಿತ್ರೀಕರಣ ನಡೆಸಬೇಕೆನ್ನುವ ಮಹದಾಸೆ. ಕಾಶ್ಮೀರದ ಸುತ್ತಮುತ್ತಲ ಪ್ರದೇಶಗಳಲ್ಲಿ ನೂರಾರು ಸ್ಥಳೀಯರನ್ನೂ ಸೇರಿಸಿಕೊಂಡು ಅವರು ಶೂಟಿಂಗ್ ನಡೆಸಿದ್ದಾರೆ. ಮಂಜಿನ ಹಿನ್ನೆಲೆಯಲ್ಲಿ ರೋಚಕ ಸಾಹಸ ದೃಶ್ಯಗಳನ್ನು ಚಿತ್ರೀಕರಿಸಲಾಗಿದೆಯಂತೆ. ವಿಜಯ್ ಅವರು ಸಂಯೋಜಿಸಿರುವ ಸಾಹಸ ದೃಶ್ಯಗಳು ಚಿತ್ರದ ಹೈಲೈಟ್ ಆಗಲಿವೆ ಎನ್ನುವುದು ನಿರ್ದೇಶಕರ ಅನಿಸಿಕೆ.

ಕಾಶ್ಮೀರದ ರಮಣೀಯತೆಯೊಂದಿಗೆ ರೌದ್ರ ಪರಿಸರವೂ ಚಿತ್ರದಲ್ಲಿ ಇದೆಯಂತೆ. ಈ ಪರಿಸರದಲ್ಲಿ ಸುಮಾರು 16 ದಿನಗಳ ಕಾಲ ಚಿತ್ರತಂಡ ಶೂಟಿಂಗ್ ನಡೆಸಿದೆ. ವೀರಸಮರ್ಥ್ ಸಂಗೀತ ಹಾಗೂ ಗುರುಪ್ರಶಾಂತ್ ರೈ ಛಾಯಾಗ್ರಹಣ ಚಿತ್ರಕ್ಕಿದೆ.



# ಅರ್ಥಪೂರ್ಣ ಶತದಿನ

'ರಾಮಾ ರಾಮಾ ರೇ...' ಚಿತ್ರತಂಡ ಕಳೆದ ವಾರ ಶತದಿನ ಸಂಭ್ರಮ ಆಚರಿಸಿಕೊಂಡಿದೆ. ಕಾಸಿಗಿಂತಲೂ ಕಲೆಯನ್ನೇ ಹೆಚ್ಚು ನೆಚ್ಚಿಕೊಂಡ ಸಿನಿಮಾಗಳಿಗೆ ದುರ್ಲಭ ಭಾಗ್ಯವಾದ ಶತದಿನೋತ್ಸವ ಸಂಭ್ರಮ 'ರಾಮಾ ರಾಮಾ ರೇ...' ಚಿತ್ರಕ್ಕೆ ಸಂದಿದೆ. ಚಿತ್ರಮಂದಿರದಿಂದ ಚಿತ್ರಮಂದಿರಕ್ಕೆ ಚಿತ್ರವನ್ನು ಕರೆದೊಯ್ಯುವ ಮೂಲಕ ತಮ್ಮ ಚಿತ್ರವನ್ನು ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ಚಿತ್ರದ ನಿರ್ಮಾತೃ ಡಿ. ಸತ್ಯಪ್ರಕಾಶ್ ಯಶಸ್ವಿಯಾಗಿದ್ದಾರೆ. ಕನ್ನಡ ಚಿತ್ರರಂಗದ ಪಾಲಿಗೆ ಈ ಗೆಲುವು ಅರ್ಥಪೂರ್ಣವಾದುದು ಹಾಗೂ ಯುವ ನಿರ್ಮಾಪಕ–ನಿರ್ದೇಶಕರಿಗೆ ಆದರ್ಶಪ್ರಾಯವಾದುದು.

'ಚಿತ್ರಮಂದಿರಲ್ಲಿ ಒಂದು ವಾರ ಉಳಿದರೆ ಸಾಕು' ಎನ್ನುವ ನಿರೀಕ್ಷೆ ಹಾಗೂ ಹಾಗೆ ಉಳಿಯುವ ಕುರಿತ ಆತಂಕದಿಂದಲೇ ಚಿತ್ರವನ್ನು ತೆರೆಕಾಣಿಸಿದ್ದ ನಿರ್ದೇಶಕರಿಗೆ, ತಮ್ಮ ಚಿತ್ರಕ್ಕೆ ದೊರೆತ ಪ್ರತಿಕ್ರಿಯೆ ಅಚ್ಚರಿ ಹುಟ್ಟಿಸಿದೆ. ತಮ್ಮ ಅಚ್ಚರಿಯನ್ನು ಅವರು ಒಂದು ಸಾಲಿನಲ್ಲಿ ವ್ಯಕ್ತಪಡಿಸುವುದು ಹೀಗೆ: 'ಕನ್ನಡ ಪ್ರೇಕ್ಷಕರಿಗೆ ನಾನು ಋಣಿ'.

ಪ್ರೇಕ್ಷಕರ ಮೆಚ್ಚುಗೆಯ ಜೊತೆಗೆ 'ಬೆಂಗಳೂರು ಸಿನಿಮೋತ್ಸವ'ದ ಕನ್ನಡ ವಿಭಾಗದಲ್ಲಿ ಪ್ರಶಸ್ತಿ ಪಡೆದಿರುವುದು ಸತ್ಯಪ್ರಕಾಶ್‌ರ 'ರಾಮಾ ರಾಮಾ ರೇ...' ವಿಶೇಷ. ಚಿತ್ರಕಥೆಗಿಂತಲೂ ಮುಖ್ಯವಾದುದು ಸಿನಿಮಾದಲ್ಲಿ ಮತ್ತೊಂದಿಲ್ಲ ಎಂದು ನಂಬಿರುವ ಈ ಯುವ ನಿರ್ದೇಶಕ ತನ್ನ ಓದು ಹಾಗೂ ಬರವಣಿಗೆಯ ಶಕ್ತಿಯನ್ನು ಹೆಚ್ಚು ನೆಚ್ಚಿದಂತಿದೆ. ದೃಶ್ಯ ಮಾಧ್ಯಮದ ತಾಂತ್ರಿಕ ಸಾಧ್ಯತೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವವರು ಹೆಚ್ಚಾಗಿರುವ ಸಂದರ್ಭದಲ್ಲಿ, ಬರವಣಿಗೆಯ ಸಾಧ್ಯತೆಗಳ ಬಗ್ಗೆ ಯೋಚಿಸುವ ಸತ್ಯಪ್ರಕಾಶ್‌ರ ನಾಳೆಯ ಪ್ರಯತ್ನಗಳನ್ನು ಕುತೂಹಲದಿಂದ ನಿರೀಕ್ಷಿಸಬಹುದು.